# ಮಹಿಳೆಯರು ಮೊಳಗಿಸುವ ಚಂಡೆ ನಾದ



ಚಂಡೆ ಪುರುಷ ಪ್ರಧಾನ ಕಲೆ ಎಂಬ ನಿರ್ಬಂಧವನ್ನು ಈ ಮಹಿಳೆಯರು ಮೀರಿದ್ದಾರೆ. ಉಡುಪಿಯ ಮಂಜೂಷಾ ಮಹಿಳಾ ಚಂಡೆ ಬಳಗ ಇದೀಗ ಈ ವಾದನದಲ್ಲಿ ಹೆಸರು ಮಾಡುತ್ತಿದೆ.

★ ಚಿತ್ರ- ಬರಹ: ಗಣಪತಿ ಹಾಸ್ಪುರ

ಯಕ್ಷಗಾನ ಪುರುಷ ಪ್ರಧಾನ ಕಲೆ ಎಂದೇ ಪ್ರಸಿದ್ಧ. ಆದರೆ, ಈಚಿನ ದಿನಗಳಲ್ಲಿ ಮಹಿಳೆಯರು ಸಹಾ ಈ ಯಕ್ಷಕಲೆಯನ್ನು ರೂಢಿಸಿಕೊಂಡು, ತಮ್ಮ ಕಲಾ ಕೌಶಲ್ಯವನ್ನು ಸಮರ್ಥವಾಗಿ ಪ್ರದರ್ಶಿಸಿ, ಅಭಿಮಾನಿಗಳ ಪ್ರಶಂಸೆಗೆ ಪಾತ್ರರಾಗುತ್ತಿದ್ದಾರೆ.

ಈ ಯಕ್ಷಗಾನ ಕಲೆಗೆ ಹಿಮ್ಮೇಳದ ಜೊತೆಗೆ ಮುಮ್ಮೇಳವು ಇರುವುದರಿಂದ ಇದು ಎಲ್ಲರನ್ನು ರಂಜಿಸುವ ಕಲೆಯಾಗಿ ಹೊರಹೊಮ್ಮಿದೆ. ಇದು ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದ ಸುಪ್ರಸಿದ್ಧ ಕಲೆಯಾದರೂ ವಿಶ್ವಾದ್ಯಂತ ಈ ಕಲೆಯ ಅಭಿಮಾನಿಗಳಿದ್ದಾರೆ. ಸಾಮಾನ್ಯವಾಗಿ ಈ ವಿಶಿಷ್ಟ ಕಲೆಯಲ್ಲಿ ಪುರುಷರ ಪ್ರಾಬಲ್ಯವೇ ಹೆಚ್ಚಿನ ಸಂಖ್ಯೆಯಲ್ಲಿದೆ. ಆದರೂ, ಮಹಿಳೆಯರು ಉತ್ಸಾಹ, ಛಲದಿಂದ ಈ ಕಲೆಯನ್ನು ಶಾಸ್ತ್ರಬದ್ಧವಾಗಿಯೇ ರೂಢಿಸಿಕೊಂಡು ಪುರುಷರಿಗೆ ಸರಿಸಾಟಿಯಾಗಿಯೇ ಅಭಿವ್ಯಕ್ತಿಪಡಿಸುತ್ತಿರುವುದು ಶ್ಲಾಘನೀಯ. ಈಗೀಗ ಮಹಿಳೆಯರ ಯಕ್ಷಗಾನ ತಂಡ, ಮಹಿಳಾ ಚಂಡೆ ಬಳಗ... ಸಹಾ ಹುಟ್ಟಿಕೊಂಡು ನಾಡಿನಾದ್ಯಂತ ತಮ್ಮ ಕಲಾ ಕೌಶಲ್ಯವನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಈ ಮಾತಿಗೆ ಉಡುಪಿಯ ಮಂಜೂಷಾ ಮಹಿಳಾ ಚಂಡೆ ಬಳಗ ಸಹಾ ಒಂದು.

## ಚಂಡೆ ಬಳಗ ಆರಂಭ

ಈ ಮಹಿಳಾ ಚಂಡೆ ಬಳಗವು ಆಕಸ್ಮಿಕವಾಗಿಯೇ ಜನ್ಮತಾಳಿತು. ಆ ದಿನಗಳಲ್ಲಿ ಧರ್ಮಸ್ಥಳದ ಸ್ವಸಹಾಯ ಸಂಘಗಳು ಹಳ್ಳಿಹಳ್ಳಿಯಲ್ಲಿ ಹುಟ್ಟಿಕೊಂಡಿತ್ತು. ಉಡುಪಿಯ ಕುಕ್ಕಿಕಟ್ಟೆ ಊರಿನಲ್ಲಿಯೂ ಸಹಾ ಸಂಘ ಆರಂಭವಾಯಿತು. ಈ ಸಂಘ ಪ್ರಾರಂಭ ಆದಮೇಲೆ ಅದರ ಚಟುವಟಿಕೆಯೊಂದಿಗೆ, ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮ ಸಂಘಟಿಸಬೇಕೆಂಬ ಅಭಿಲಾಷೆ ಸದಸ್ಯರಲ್ಲಿ ಟಿಸಿಲೊಡೆದಿತ್ತು. ಆ ಆಸೆಯನ್ನು ಈಡೇರಿಸಲು ಸಂಘದ ಮಹಿಳಾ ಮಣಿಗಳು ಚಿಂತಿಸಿ ಭಜನಾ ಸ್ಪರ್ಧೆ ನಡೆಸಲು ಉದ್ದೇಶಿಸಿದರು. ಆ ಸ್ಪರ್ಧೆಯನ್ನು ಯಶಸ್ವಿಯಾಗಿ ಸಂಘಟಿಸಿದ ಅವರ ದೃಷ್ಟಿ ಚಂಡೆ ಕಲೆಯತ್ತ ಹೊರಳಿತು. ಕೆಲವು ಸದಸ್ಯರು ಅದನ್ನು ರೂಢಿಸಿಕೊಳ್ಳಲು ಬಹಳ ಆಸಕ್ತಿ ವಹಿಸಿದರು. ನಂತರ ಮಾರ್ಚ್ 28, 2010ರಲ್ಲಿ ಮಂಜೂಷಾ ಮಹಿಳಾ ಚಂಡೆ ಬಳಗ ಹುಟ್ಟಿಕೊಂಡಿತು.

ಕುಕ್ಕೆಕಟ್ಟೆಯ ಮಂಜೂಷಾ ಮಹಿಳಾ ತಂಡದ ಸದಸ್ಯರು ಅಲೆಯೂರಿನ ನಾಗರಾಜ ಭಟ್ಟರಿಂದ ಚಂಡೆ ಬಾರಿಸುವುದನ್ನು ಕಲಿಯಲು ಆರಂಭಿಸಿದರು. ಆರಂಭದ ಆರು ತಿಂಗಳು ನೆಲದಲ್ಲಿ ಹಾಗೂ ನಂತರ ಮೂರು ತಿಂಗಳ ಕಾಲ ಮರದ ತುಂಡಿನಲ್ಲಿಯೇ ತಾಳದ ಅಭ್ಯಾಸ ನಡೆಯಿತು. ಆಮೇಲೆ ಚಂಡೆ ಬಾರಿಸಲು ಶುರುವಾಯಿತು. ಚಂಡೆ ಕಲೆಯನ್ನು ರೂಢಿಸಿಕೊಳ್ಳಲು ತೊಡಗಿಕೊಂಡ ಎಲ್ಲಾ ಮಹಿಳೆಯರಿಗೂ ಯಜಮಾನರ (ಪತಿ) ಸಹಕಾರ, ಪ್ರೋತ್ಸಾಹವಿದೆ. ಮಂಜೂಷಾ ತಂಡದ ಸದಸ್ಯರು ಚಂಡೆ ಕಲೆಯಲ್ಲಿ ಸಕ್ರೀಯವಾಗಿ ತೊಡಗಿಕೊಳ್ಳಲು ಸಹಕಾರಿಯಾಗಿದೆ.

ಈ ಚಂಡೆ ತಂಡ ಪ್ರಪ್ರಥಮ ಬಾರಿಗೆ ಅಲೆಯೂರಿನ ಬ್ರಹ್ಮ ಮಂಡಳ ಉತ್ಸವದಲ್ಲಿ ಪ್ರದರ್ಶಿಸಿತು. ಮೊದಲ ಪ್ರದರ್ಶನದಲ್ಲಿ ಈ ಮಾನಿನಿಯರ ಕೈಚಳಕದಿಂದ ನುಡಿಸಿದ ಚಂಡೆಯ ವಾದನ ಯಕ್ಷ ಪ್ರೇಮಿಗಳ ಗಮನ ಸೆಳೆಯಿತು. ಅಡುಗೆ ಕೆಲಸ, ಮಕ್ಕಳ ಲಾಲನೆ ಪಾಲನೆ, ಸಂಸಾರದ ತಾಪತ್ರೆಯಲ್ಲಿಯೇ ದಿನದ ಬಹುಹೊತ್ತು ಕಳೆಯುವ ಗೃಹಿಣಿಯರು ಬಹಳ ಉತ್ಸಾಹದಿಂದ ಲಯಬದ್ಧವಾಗಿ ಚಂಡೆ ನುಡಿಸಿದಾಗ ಆಗುವ ಆನಂದವೇ ಬೇರೆ. ಮೊದಲ ಪ್ರಯತ್ನದಲ್ಲಿಯೇ ಯಶಸ್ವಿಯಾದ ಈ ಹೆಂಗಳೆಯರ ಚಂಡೆ ತಂಡಕ್ಕೆ ಎಲ್ಲಾ ಕಡೆಯಿಂದಲೂ ಕಲಾ ಪ್ರದರ್ಶಕ್ಕೆ ಆಹ್ವಾನ ಬರತೊಡಗಿತು.

ಆಹ್ವಾನವನ್ನು ಮನ್ನಿಸಿ, ತಮ್ಮ ಕೈಚಳಕದ ಕಲೆಯನ್ನು ಹೊರ ಊರಿನಲ್ಲಿಯೂ ಪ್ರದರ್ಶಿಸಲು ಸಂಕಲ್ಪಿಸಿದರು. ಅದರಂತೆ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆಗಳಲ್ಲಿ, ಸಾಗರ, ಸೊರಬ, ಮೈಸೂರು, ತೀರ್ಥಹಳ್ಳಿ, ಮುರ್ಡೇಶ್ವರ.....ಸೇರಿದಂತೆ ಕರ್ನಾಟಕದ ಅನೇಕ ಕಡೆಗಳಲ್ಲಿ ಸುಶ್ರಾವ್ಯವಾಗಿ ಚಂಡೆ ಬಾರಿಸಿದ ಹೆಗ್ಗಳಿಕೆ ಈ ತಂಡದ್ದು, ಅಲ್ಲದೇ, ಮಹಾರಾಷ್ಟ್ರ, ಕೇರಳ, ಆಂದ್ರ ಪ್ರದೇಶದಲ್ಲಿಯೂ ತಾವೂ ರೂಢಿಸಿಕೊಂಡ ಕಲೆಯನ್ನು ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾರೆ. ಈ ಚಂಡೆ ತಂಡ ಉಡುಪಿಯ ಮಚ್ಚಲಾ ಸುಬ್ರಮಣ್ಯ ದೇವಸ್ಥಾನ (ಪೇಜಾವರ), ಉಡುಪಿಯ ಪರ್ಯಾಯ ಉತ್ಸವ....ಹೀಗೆ ಕೆಲ ಕಡೆಗಳಲ್ಲಿ ಸೇವೆಯನ್ನು ಸಹಾ ನೀಡುತ್ತಿರುವುದು ವಿಶೇಷ.

ಕಳೆದ ಆರು ವರ್ಷಗಳಿಂದ ಈ ಚಂಡೆ ಬಳಗ ಸೊಗಸಾಗಿಯೇ ಚಂಡೆಯ ಸದ್ದು ಮೊಳಗಿಸುತ್ತದೆ. ಶೋಭಾಯಾತ್ರೆ, ಜಾತ್ರೆ, ಉತ್ಸವ....ಮುಂತಾದ ವಿಶೇಷ ಸಂದರ್ಭಗಳಲ್ಲಿ ಬಹಳ ಉತ್ಸಾಹದಿಂದ ತಮ್ಮಲ್ಲಿ ಅಡಕವಾದ ಕೈಚಳಕದ ಕಲೆಯನ್ನು ಪ್ರದರ್ಶಿಸುತ್ತಾ ಬಂದಿದೆ. ಇದುವರೆಗೆ ಸುಮಾರು 500ಕ್ಕೂ ಹೆಚ್ಚು ಪ್ರದರ್ಶನ ನೀಡಿದ ಹೆಗ್ಗಳಿಕೆ ಈ ತಂಡದ್ದು. ತಾರಾ ಆಚಾರ್ಯ ಹಾಗೂ ರಮಾ ರಾವ್ ಅವರ ಮುಂದಾಳತ್ವದಲ್ಲಿ ಈ ಚಂಡೆ ತಂಡ ಮುನ್ನಡೆಯುತ್ತಿದೆ.

(ಮಾಹಿತಿಗೆ: 8050458471)